**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯ, ಕೊಪ್ಪ</u>**

**<u>ಸಿ. ಸಿ. ನಂ.653/2024</u>**

**<u>ಪಿರ್ಯಾಧಿದಾರರು:</u>** ರಾಜ್ಯದ ಪರವಾಗಿಃ ಕೊಪ್ಪ ಪೊಲೀಸರು

**-ವಿರುದ್ಧ-**

**<u>ಆರೋಪಿ/ತರುಃ</u>** 1. ಗೌತಮ್ ಎಂ. ಬಿನ್ ಮಂಜುನಾಥ, 27 ವರ್ಷ, ಖಾಸಗಿ ಕಂಪನಿಯಲ್ಲಿ ಕೆಲಸ, ವಾಸ 91/1, ಬಸವನಪುರ ಬನ್ನೇರುಘಟ್ಟ ಮುಖ್ಯ ರಸ್ತೆ, ಬೆಂಗಳೂರು-83.

2. ಸುನೀಲ್ ಬಿನ್ ಶೇಖರ, 32 ವರ್ಷ, ಕೂಲಿಕೆಲಸ, ವಾಸ ಮಾವಿನಕಟ್ಟೆ, ಕುದುರೆಗುಂಡಿ, ಕೊಪ್ಪ ತಾಲ್ಲೂಕು.

**<u>ಆರೋಪಣೆ</u>**

ದಿನಾಂಕ 06.05.2024 ರಂದು ಮಧ್ಯಾಹ್ನ 1.15 ಗಂಟೆ ಸಮಯದಲ್ಲಿ ಕೊಪ್ಪ ಠಾಣಾ ವ್ಯಾಪ್ತಿಗೆ ಸೇರಿದ ತಲಮಕ್ಕಿ ಗ್ರಾಮದ ಕುದುರೆಗುಂಡಿ ಕೊಪ್ಪ- ಶಿವಮೊಗ್ಗ ರಾಜ್ಯ ಹೆದ್ದಾರಿಯಲ್ಲಿ 1ನೇ ಆರೋಪಿಯಾದ ನೀವು ಕೆಎ-03-ಎಂ.ಸಿ.1022 ರ ಕ್ವಾಲಿಸ್ ಕಾರನ್ನು ಅತೀವೇಗ ಹಾಗೂ ಅಜಾಗರೂಕತೆಯಿಂದ ಸಾರ್ವಜನಿಕ ರಸ್ತೆಯಲ್ಲಿ ಚಾಲನೆ ಮಾಡಿಕೊಂಡು ತನ್ನ ಮುಂದೆ ಹೋಗುತ್ತಿದ್ದ ಬೈಕನ್ನು ಓವರ್ ಟೇಕ್ ಮಾಡಲು ಹೋಗಿ ಕಾರನ್ನು ರಸ್ತೆಯ ತೀರಾ ಬಲಬದಿಗೆ ಚಾಲನೆ ಮಾಡಿಕೊಂಡು ಬಂದು ಎದುರುಗಡೆಯಿಂದ ಬಂದ ಕೆಎ-18/ಇಎಫ್-8688 ನಂಬರಿನ ಮೋಟಾರು ಸೈಕಲಿಗೆ ಡಿಕ್ಕಿ ಹೊಡೆಸಿ ಅಪಘಾತವನ್ನುಂಟು ಮಾಡಿದ್ದಿರೀ. ಇದರಿಂದಾಗಿ ಈ ನಿಮ್ಮ ಕೃತ್ಯವು ಭಾರತ ದಂಡ ಸಂಹಿತೆ ಕಲಂ 279 ರ ಅಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತಿರೆಂದು ಆರೋಪಣೆ ಹೊರಿಸಲಾಗಿದೆ.

ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1ನೇ ಆರೋಪಿಯಾದ ನೀವು ಮೇಲ್ಕಂಡಂತೆ ಅಪಘಾವವನ್ನುಂಟು ಮಾಡಿದ ಪರಿಣಾಮ ನಂ. ಕೆಎ-18/ಇಎಫ್ - 8688 ಬೈಕಿನ ಚಾಲಕ ಚಾಸಾ.11 ಪ್ರಸನ್ನ ರವರಿಗೆ ಬಲಗಾಲಿಗೆ ಪೆಟ್ಟಾಗಿ ತೀವ್ರ ಸ್ವರೂಪದ ಗಾಯಗಳಾಗಿರುತ್ತದೆ. ಇದರಿಂದಾಗಿ ಈ ನಿಮ್ಮ ಕೃತ್ಯವು ಭಾರತ ದಂಡ ಸಂಹಿತೆ ಕಲಂ 338 ರ ಅಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತಿರೆಂದು ಆರೋಪಣೆ ಹೊರಿಸಲಾಗಿದೆ.

ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1ನೇ ಆರೋಪಿಯಾದ ನೀವು ಮೇಲ್ಕಂಡಂತೆ ಅಪಘಾವವನ್ನುಂಟು ಮಾಡಿದ ಪರಿಣಾಮ ನಂ.ಕೆಎ-18/ಇಎಫ್ - 8688 ಬೈಕಿನ ಹಿಂಬದಿ ಸವಾರ ಕೆರೆಸ್ವಾಮಿ ಬಿನ್ ಯಲ್ಲಪ್ಪ, 56 ವರ್ಷ, ಇವರಿಗೆ ಬಲಗಾಲಿಗೆ ಮತ್ತು ಹಣೆಗೆ ತೀವ್ರ ತರಹದ ಪೆಟ್ಟಾಗಿ ಅಪಘಾತದಿಂದಾದ ಗಾಯಗಳಿಂದಾಗಿ ಮೃತಪಟ್ಟಿರುತ್ತಾರೆ. ಇದರಿಂದಾಗಿ ಈ ನಿಮ್ಮ ಕೃತ್ಯವು ಭಾರತ ದಂಡ ಸಂಹಿತೆ ಕಲಂ 304(ಎ)ರ ಅಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ

ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತಿರೆಂದು ಆರೋಪಣೆ ಹೊರಿಸಲಾಗಿದೆ.

2 ನೇ ಆರೋಪಿಯಾದ ನೀವು ನಿಮ್ಮ ಬಾಬ್ತು ಕೆಎ-18/ಇಎಫ್ - 8688 ಸ್ಲೇಂಡರ್ ಪ್ಲಸ್ ಮೋಟಾರ್ ಬೈಕಿಗೆ ಚಾಲನಾ ಪರವಾನಿಗೆ ಹೊಂದಿಲ್ಲದೆ ಇರುವ ಚಾಸಾ.11 ರವರಿಗೆ ಬೈಕನ್ನು ನೀಡಿದ್ದೀರಿ ಆದ ಕಾರಣ 2 ನೇ ಆರೋಪಿಯಾದ ನೀವು ಮೋಟಾರು ವಾಹನ ಕಾಯ್ದೆ ಕಲಂ **180** ರ ಅಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತಿರೆಂದು ಆರೋಪಣೆ ಹೊರಿಸಲಾಗಿದೆ.

ಪ್ರಶ್ನೆ.1: ನಿಮಗೆ ಓದಿ ಹೇಳಿದ ಆಪಾದನೆಯು ತಿಳಿಯಿತೆ?

ಉತ್ತರ: ಆ-1 ತಿಳಿಯಿತು

ಆ-2 ತಿಳಿಯಿತು

ಪ್ರಶ್ನೆ.2: ನೀವು ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ನಡೆಸುವಿರೋ?

ಉತ್ತರ: ಆ-1 ವಿಚಾರಣೆಯಾಗಬೇಕು

ಆ-2 ವಿಚಾರಣೆಯಾಗಬೇಕು

(ಮೇಲ್ಕಂಡ ಆರೋಪಣೆಯನ್ನು ದಿನಾಂಕ 07.01.2026 ರಂದು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಅವರಿಂದ ಬಂದ ಸಮರ್ಪಕವಾದ ಉತ್ತರಗಳನ್ನು ಪಡೆದು ದಾಖಲಿಸಿಕೊಳ್ಳಲಾಯಿತು ಎಂದು ಈ ಮೂಲಕ ದೃಢೀಕರಿಸುತ್ತೇನೆ.)

ಸಹಿ/- 07.01.2026.
(ನಂದಿನಿ ಎಂ.ಎನ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂಃ ಕೊಪ್ಪ.